ಈ) ಲೋಕೋಪಯೋಗಿ ಇಲಾಖೆ ತನ್ನ ವಶಕ್ಕೆ ತೆಗೆದುಕೊಳ್ಳಲಂ ಇರುವ ಅಡಚಣೆ ಯಾದರೂ ಏನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಒಟ್ಟು ೩೬ ರಸ್ತೆಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿ ಕೊಡಲಾಗಿದೆ. ಈ ರಸ್ತೆಗಳ ಒಟ್ಟು ಉದ್ದ ೧೮೩.೨ ಕಿ.ಮೀಗಳಾಗಿರುತ್ತದೆ.

ಆ) ೧) ಹಳ್ಳಿ ರಸ್ತೆಗಳು ೧೫೬ ಕಿ.ಮಿ ಉದ್ದ.
೨) ಇತರೆ ಜಿಲ್ಲಾ ರಸ್ತೆಗಳು ೨೭.೨ ಕಿ.ಮೀ. ಉದ್ದ.

ಇ) ಇರುವುದಿಲ್ಲ.

ಈ) ಸಂಬಂಧಪಟ್ಟ ರಸ್ತೆಗಳನ್ನು ಎಂ.ಡಿ.ಆರ್. ಅಥವಾ ರಾಜ್ಯ ಹೆದ್ದಾರಿ ಆಗಿ ಮೇಲ್ದರ್ಜೆಗೆ ಏರಿಸಿದ ಮೇಲೆ ಮಾತ್ರವೆ ಜಿಲ್ಲಾ ಪರಿಷತ್ತು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ.

ರಾಣೆಬೆನ್ನೂರಿನ ತಾಲ್ಲೂಕಿನ ಮೆಡ್ಲೇರಿ, ಮಾಕನೂರು ಮತ್ತು ನಲವಾಗಲು ಏತ ನೀರಾವರಿ ಯೋಜನೆಗಳು

೧೦೮೩. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೆಲವು ಮುಖ್ಯ ಏತ ನೀರಾವರಿ ಯೋಜನೆಗಳನ್ನು ಏತ ನೀರಾವರಿ ನಿಗಮಕ್ಕೆ ವಹಿಸದೇ ಸರ್ಕಾರವೇ ತೆಗೆದುಕೊಳ್ಳುವುದೆಂದು ಆರ್ಥಿಕ ಸಚಿವರು ತಮ್ಮ ಆಯವ್ಯಯಂ ಭಾಷಣದಲ್ಲಿ ತಿಳಿಸಿರುವುದು ನಿಜವೇ ?

ಆ) ಈ ಕೆಳಗಿನ ಮುಖ್ಯ ಏತ ನೀರಾವರಿ ಯೋಜನೆಗಳನ್ನು ಪ್ರಸಕ್ತ ಸಾಲಿನಲ್ಲಿ ತೆಗೆದು ಕೊಳ್ಳುವ ಉದ್ದೇಶ ಸರ್ಕಾರಕ್ಕಿದೆಯೇ ?

೧) ರಾಣೆಬೆನ್ನೂರು ತಾಲ್ಲೂಕಿನ ಮೆಡ್ಲೇರಿ ಏತ ನೀರಾವರಿ ಯೋಜನೆ,
೨) ರಾಣೆಬೆನ್ನೂರು ತಾಲ್ಲೂಕಿನ ಮಾಕನೂರು ಏತ ನೀರಾವರಿ ಯೋಜನೆ.
೩) ರಾಣೆಬೆನ್ನೂರು ತಾಲ್ಲೂಕಿನ ನಲವಾಗಲು ಏತ ನೀರಾವರಿ ಯೋಜನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ರಾಣೆಬೆನ್ನೂರ ತಾಲ್ಲೂಕಿನ ಈ ಮೂರೂ ಏತ ನೀರಾವರಿ ಯೋಜನೆಗಳಲ್ಲಿ ಮೆಡ್ಲೇರಿ ಮತ್ತು ನಲವಾಗಲು ಯೋಜನೆಗಳು ಬಿಜಾಪುರದ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದ ಪ್ರಸಕ್ತ ಸಾಲಿನ ಕಾರ್ಯಯೋಜನೆಯ ಪಟ್ಟಿಯಲ್ಲಿ ಸೇರಿರುವುದಿಲ್ಲ. ಯೋಜನೆಗಳು ಕಾರ್ಯ ಸಾಧುವಾ ಕಂಡು ಬಂದಲ್ಲಿ, ಈ ಎರಡು ಯೋಜನೆಗಳನ್ನು ನಿಗಮದ ಮುಂಬರುವ ಯೋಜನೆಗಳ ಪಟ್ಟಿಯಲ್ಲಿ ಸೇರಿಸಿ ಕೊಳ್ಳಲಾಗುತ್ತದೆ.

ಉಳಿದ ಯೋಜನೆಯಾದ, ಮಾಕನೂರು ಏತ ನೀರಾವರಿ ಯೋಜನೆಯು ಸಹ ನಿಗಮದ ಪ್ರಸಕ್ತ ಸಾಲಿನ ಕಾರ್ಯ ಯೋಜನೆಯ ಪಟ್ಟಿಯಲ್ಲಿ ಸೇರಿಲ್ಲ. ಈ ಏತ ನೀರಾವರಿಯ ಅಚ್ಚುಕಟ್ಟು ಪ್ರದೇಶದಲ್ಲಿನ ರೈತರು ಸ್ವಂತ ಪಂಪುಗಳನ್ನು ಅಳವಡಿಸಿಕೊಂಡು ನೀರಾವರಿಯಾಗಬೇಕಾದ ಶೇಕಡ ೮೦ ರಷ್ಟು ಕ್ಷೇತ್ರವನ್ನು ನೀರಾವರಿಗೆ ಈಗಾಗಲೇ ಒಳಪಡಿಸಿಕೊಂಡಿರುವುದರಿಂದ, ಈ ಯೋಜನೆಯನ್ನು ಕೈಗೆತ್ತಿ ಕೊಳ್ಳುವ ಪ್ರಸ್ತಾವನೆಯಂ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ದಿನಾಂಕ ೨೪-೬-೯೦ ರಂದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಹೆತ್ತೊಂಬತ್ತನೆಯ ಪಟ್ಟಿಯಲ್ಲಿರುವ ೨೨ ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ ೯೮೨ ಹಾಗೂ ೭೭೦ ಅನ್ನು ಹೊರತುಪಡಿಸಿ ಇನ್ನುಳಿದ ೭೦ ಚುಕ್ಕೆಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.